ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1623
ಸದಸ್ಯರ ಹೆಸರು	: ಶ್ರೀ ಕೆ.ಎ. ತಿಪ್ಪೇಸ್ವಾಮಿ
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 20-03-2020

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಮಾಲಿನ್ಯ ತಡೆಗಟ್ಟುವ ಸಲುವಾಗಿ ಎಲೆಕ್ಟ್ರಾನಿಕ್ ಬಸ್‌ಗಳನ್ನು ರಸ್ತೆಗಿಳಿಸಲು ಸರ್ಕಾರ ನಿರ್ಧಾರ ಕೈಗೊಂಡಿದೆಯೇ; ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;</td><td>ಹೌದು.

ಬೆಂ.ಮ.ಸಾ.ಸಂಸ್ಥೆಯು ಪರಿಸರ ಮಾಲಿನ್ಯ ನಿಯಂತ್ರಿಸಲು 300 ಹವಾನಿಯಂತ್ರಿತ 12ಮೀ ಎಲೆಕ್ಟ್ರಿಕ್ ಬಸ್ಸುಗಳನ್ನು ಫೇಮ್-2 ಯೋಜನೆಯಡಿಯಲ್ಲಿ ಹಾಗೂ 90 ಹವಾನಿಯಂತ್ರಣ ರಹಿತ 9 ಮೀ ಎಲೆಕ್ಟ್ರಿಕ್ ಬಸ್ಸುಗಳನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಆಚರಣೆ ಮಾಡಲು ಟೆಂಡರ್ ಅನ್ನು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಮುಂದುವರೆದು, 2020-21ನೇ ಸಾಲಿನಲ್ಲಿ 500 ಎಲೆಕ್ಟ್ರಿಕ್ ಬಸ್ಸುಗಳನ್ನು ಆಚರಣೆ ಮಾಡಲು ಯೋಜಿಸಲಾಗಿದೆ.</td></tr>
<tr><td>ಆ</td><td>ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಸಚಿವಾಲಯವು 2ನೇ ಹಂತದ ಫೇಮ್ ಇಂಡಿಯಾ ಯೋಜನೆಯಡಿ ಎಷ್ಟು ಎಲೆಕ್ಟ್ರಾನಿಕ್ ಬಸ್‌ಗಳನ್ನು (ನಾಲ್ಕು ಸಾರಿಗೆ ನಿಯಮಗಳು ಸೇರಿದಂತೆ) ನೀಡಲು ನಿರ್ಧರಿಸಿದೆ;</td><td>2020-21ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಿಂದ ಜಿ.ಸಿ.ಸಿ ಮಾಡೆಲ್‌ನ ಆಧಾರದ ಮೇಲೆ ಆಚರಣೆಗೊಳಿಸಲು ಯೋಜಿಸಿರುವ ವಿದ್ಯುತ್ ವಾಹನಗಳನ್ನು ಸಂಖ್ಯೆ ಈ ಕೆಳಗಿನಂತಿದೆ:
<table><tr><th>ಸಂಸ್ಥೆ</th><th>ಬಸ್ಸುಗಳ ಸಂಖ್ಯೆ</th></tr><tr><td>ಕ.ರಾ.ರ.ಸಾ.ನಿಗಮ</td><td>50</td></tr><tr><td>ಬೆಂ.ಮ.ಸಾ.ಸಂಸ್ಥೆ</td><td>300</td></tr><tr><td>ವಾ.ಕ.ರ.ಸಾ.ಸಂಸ್ಥೆ</td><td>50</td></tr><tr><td>ಈ.ಕ.ರ.ಸಾ.ಸಂಸ್ಥೆ</td><td>--</td></tr><tr><td>ಒಟ್ಟು</td><td>400</td></tr></table></td></tr>
<tr><td>ಇ</td><td>ಪ್ರತಿ ಬಸ್ಸಿಗೆ ಭಾರತ ಸರ್ಕಾರ ನೀಡುವ ಸಹಾಯ ಧನ ಮೊತ್ತವೆಷ್ಟು; (ವಿವರ ನೀಡುವುದು)</td><td>ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಸಚಿವಾಲಯವು 12ಮೀ ಪ್ರತಿ ಎಲೆಕ್ಟ್ರಿಕ್ ಬಸ್ಸಿಗೆ ಗರಿಷ್ಠ ಬೇಡಿಕೆ ಪ್ರೋತ್ಸಾಹ ಧನ ರೂ.55.00 ಲಕ್ಷ ಅನ್ನು ನೀಡುತ್ತದೆ.</td></tr>
<tr><td>ಈ</td><td>ಸಹಾಯ ಧನವನ್ನು ನಿಗಧಿತ ಅವಧಿಯೊಳಗೆ ರಾಜ್ಯ ಸರ್ಕಾರ ಬಳಸಿಕೊಳ್ಳದೆ ಇರುವುದರಿಂದ ಈ ಸಹಾಯ ಧನ ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="3">ಕೇಂದ್ರ ಸರ್ಕಾರದ ಫೇಮ್-2 ಯೋಜನೆಯು 1ನೇ ಏಪ್ರಿಲ್ 2019ರಿಂದ ಪ್ರಾರಂಭವಾಗಿದ್ದು ಮೂರು ವರ್ಷ ಅವಧಿಗೆ ಸೀಮಿತವಾಗಿರುತ್ತದೆ. ಮುಂದುವರೆದು, ಎಲೆಕ್ಟ್ರಿಕ್ ಬಸ್ಸುಗಳ ಆಚರಣೆಗೆ ಆದೇಶ ನೀಡಲು ಕೇಂದ್ರ ಸರ್ಕಾರವು ದಿನಾಂಕ: 29.02.2020ರವರೆಗೆ ಅಂತಿಮ ದಿನಾಂಕ ನೀಡಿದ್ದು, ಎಲೆಕ್ಟ್ರಿಕ್ ಬಸ್ಸುಗಳ ಆಚರಣೆ ಆದೇಶವನ್ನು ನೀಡುವ ದಿನಾಂಕವನ್ನು ಟೆಂಡರ್ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೂ ನೀಡಲು ದಿನಾಂಕ: 28.02.2020ರಂದು ಕೇಂದ್ರ ಸರ್ಕಾರವನ್ನು ಕೋರಲಾಗಿರುತ್ತದೆ.

ಕೇಂದ್ರ ಸರ್ಕಾರದ ಭಾರಿ ಕೈಗಾರಿಕೆಗಳ ಇಲಾಖೆಯ ಫೇಮ್-2 ಯೋಜನೆಯಂತೆ ಎಲೆಕ್ಟ್ರಿಕ್ ಬಸ್ಸುಗಳನ್ನು ಒಪೆಕ್ಸ್ ಯೋಜನೆಯಡಿಯಲ್ಲಿ ಕಾರ್ಯಾಚರಣೆ ಮಾಡಬೇಕೆಂದು ಸ್ಪಷ್ಟ ಸೂಚನೆಗಳನ್ವಯ ಎಲೆಕ್ಟ್ರಿಕ್ ಬಸ್ಸುಗಳ ಕಾರ್ಯಾಚರಣೆಗಾಗಿ ಆಪರೇಟರ್‌ರನ್ನು ಆಯ್ಕೆ ಮಾಡಲು ಟೆಂಡರ್ ಆಹ್ವಾನಿಸಿದ್ದು, ಪ್ರಕ್ರಿಯೆ ಜಾರಿಯಲ್ಲಿರುತ್ತದೆ.</td></tr>
<tr><td>ಉ</td><td>ಬಂದಿದ್ದಲ್ಲಿ, ಈ ಬಗ್ಗೆ ವಿಳಂಬ ಧೋರಣೆ ತೋರಿದ ಅಧಿಕಾರಿಗಳ ಬಗ್ಗೆ ಸರ್ಕಾರ ಇದುವರೆಗೆ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು)</td></tr>
<tr><td>ಊ</td><td>ಈ ಎಲೆಕ್ಟ್ರಾನಿಕ್ ಬಸ್‌ಗಳನ್ನು ಮತ್ತೆ ಖರೀದಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ? (ವಿವರ ನೀಡುವುದು)</td></tr>
</table>

ಸಂಖ್ಯೆ: ಟಿಡಿ 127 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು